ಓ:ಎಸ್:ನಂ.50/2020

ಪಿ.ಡಬ್ಲ್ಯೂ- 1

***ದಿಃ 10-11-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಲ್ ಆರ್ ವಕೀಲರಿಂದ***

ಪ್ರತಿವಾದಿ ತಂದೆಗೆ ಒಟ್ಟು 5 ಜನ ಮಕ್ಕಳಿದ್ದು, ಅದರಲ್ಲಿ ಪ್ರತಿವಾದಿ ಮತ್ತು ನಾಲ್ಕು ಜನ ಹೆಣ್ಣು ಮಕ್ಕಳಿರುತ್ತಾರೆ. ಕರಿಯಪ್ಪನ ತಂದೆಗೆ ಆತನು ಒಬ್ಬನೇ ಮಗ ಆಗಿರುತ್ತಾನೆ. ದಾವ ಸ್ವತ್ತುಗಳ ಜಮೀನಿನಲ್ಲಿ ಶಾಲೆ, ಆಟದ ಮೈದಾನ ಇವೆ ಎಂದರೆ ಸರಿ. ದಾವ ಸ್ವತ್ತಿನಲ್ಲಿ ಯಾರೂ ಬೇಸಾಯ ಮಾಡುತ್ತಿಲ್ಲ ಎಂದರೆ ಸರಿ. ನಿಪಿ-1, 1974 ರ ಪತ್ರವಾಗಿರುತ್ತದೆ. ಅಂದಿನಿಂದಲೂ ನಿಪಿ-1 ನನ್ನ ಬಳಿ ಇರುತ್ತದೆ. ನಿಪಿ-1 ರಂತೆ ದಾವ ಸ್ವತ್ತಿನ ಖಾತೆ ಮಾಡಲು ನಾನು ಅರ್ಜಿಗಳನ್ನು ಸಲ್ಲಿಸಿದ್ದು, ಅದಕ್ಕೆ ಹಿಂಬರಹ ನೀಡಿದ್ದು, ಅವು ಕಳೆದು ಹೋಗಿರುತ್ತವೆ. ಸಾಕ್ಷಿ ಮುಂದುವರಿದು ಹಿಂಬರಹ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆ ಸುಮಾರು 25 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ದಾವ ಸ್ವತ್ತು ಸರ್ವೆ ನಂ.1/1 ರಲ್ಲಿ 50 ಅಡಿ, 1/2 ರಲ್ಲಿ 100 ಅಡಿ ಇರುತ್ತದೆ. ಸರ್ವೆ ನಂ. 1/1 ರ ಚಕ್ಕುಬಂದಿ ಪೂರ್ವಕ್ಕೆಃ ಲಕ್ಷ್ಮಪ್ಪ, ಪಶ್ಚಿಮ ಮತ್ತು ದಕ್ಷಿಣಕ್ಕೆಃ ಪ್ರತಿವಾದಿ ಜಮೀನು, ಉತ್ತರಕ್ಕೆಃ ರಂಗಪ್ಪನ ಜಮೀನು ಇರುತ್ತದೆ. ಸರ್ವೆ ನಂ. 1/2 ರ ಚಕ್ಕುಬಂದಿಯು ಸಹ ಅದೇ ಆಗಿರುತ್ತದೆ. ಸರ್ವೆ ನಂ. 1/1 ರಲ್ಲಿ ಮತ್ತು 1/2 ರಲ್ಲಿ ಸ್ವತ್ತಿನ ಅಳತೆ ಅಗಲ 40 ಅಡಿ ಇರುತ್ತದೆ. ದಾವ ಸ್ವತ್ತು ಸರ್ವೆ ನಂಬರ್ ಒಂದಕ್ಕೊಂದು ಲಗತ್ತಾಗಿರುವ ಬಗ್ಗೆ ಕ್ರಯಪತ್ರದಲ್ಲಿ ಬರೆದಿದ್ದು, ಬೇರೆ ದಾಖಲೆ ಇರುವುದಿಲ್ಲ. ನಾನು ಎಂದೂ ಸಹ ದಾವ ಸ್ವತ್ತಿನಲ್ಲಿ ಸ್ವಾಧೀನ ಹೊಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ದಾವ ಸ್ವತ್ತಿನ ಖಾತೆದಾರರು ಎನ್ನುವ ಬಗ್ಗೆ ದಾಖಲೆ ಇರುವುದಿಲ್ಲ. ಆದರೆ, ಅವರೇ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ. ವೀರಭದ್ರಪ್ಪನ ಅಣ್ಣ ತಮ್ಮಂದಿರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ಕರಿಯಪ್ಪನಿಗೆ ಸಿದ್ರಾಮಪ್ಪ ಮತ್ತು ಬಸವರಾಜಪ್ಪ ಎಂದು ಅಣ್ಣ ತಮ್ಮ ಇದ್ದಾರೆಂದರೆ ನನಗೆ ಗೊತ್ತಿಲ್ಲ. ಕರಿಯಪ್ಪ ಖರೀದಿಸಿರುವ ಸ್ವತ್ತು ಜಂಟಿ ಖಾತೆ ಇರುವುದಿಲ್ಲ. ಪ್ರತಿವಾದಿ ನನಗೆ ಸಂಬಂಧಿಕನಾಗಬೇಕು. ದಾವ ಸಲ್ಲಿಸುವ ಕಾಲಕ್ಕೆ ಇರುವ ದಾವ ಸ್ವತ್ತಿನ ಪಹಣಿಯನ್ನು ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು 1974-75 ರ ದಾವ ಸ್ವತ್ತಿನ ಪಹಣಿಯನ್ನು ಹಾಜರುಪಡಿಸಿಲ್ಲ. ದಾವ ಸಲ್ಲಿಸುವ ಕಾಲಕ್ಕೆ ಇರುವ ಪಹಣಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.ರವರು,ತರೀಕೆರೆ.